FDP 10/2018

ಪಿ.ಡಬ್ಲ್ಯೂ.01

ದಿನಾಂಕಃ 09-09-2024

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿ ಸವಾಲು ಎದುರುದಾರ ಪರ ಶ್ರೀ BR ವಕೀಲರಿಂದ ಃ**

ನನ್ನ ತಂದೆಯ ಹೆಸರು ಮಹಾದೇವಪ್ಪ ಎಂದು ಇರುತ್ತದೆ. ನನ್ನ ತಾಯಿಯ ಹೆಸರು ಪಾರ್ವತಮ್ಮ ಎಂದು ಇರುತ್ತದೆ. ಅವರು ಈ ಪ್ರಕರಣದಲ್ಲಿ 4 ನೇ ಎದುರದಾರರಾಗಿದ್ದರು. ನಮ್ಮ ತಂದೆ ತಾಯಿಗೆ ನಾವು 5 ಜನ ಮಕ್ಕಳು. ಅವರೇಂದರೆ ಶರಣಪ್ಪ, ನಾನು ಶಕುಂತಲಾ, ಶೇಖರಪ್ಪ, ಶಿವರಾಜ ಮತ್ತು ರತ್ನಮ್ಮ. ಇಷ್ಟು ಜನರನ್ನು ಹೊರತುಪಡಿಸಿ ಬೇರೆ ಮಕ್ಕಳು ಯಾರು ಇರುವುದಿಲ್ಲ.

2. ನಮ್ಮ ತಂದೆಗೆ ಒಟ್ಟು 27 ಎಕರೆ ಜಮೀನು ಇರುತ್ತದೆ. ದಾವೆಯಲ್ಲಿ ತಲಾ 1/6 ಭಾಗ ಕೊಡುವಂತೆ ಡಿಕ್ರಿ ಯಾಗಿರುತ್ತದೆ ಎಂದರೆ ಸರಿ. ಸದರಿ ಡಿಕ್ರಿಯ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಲಾಗಿದೆ ಎಂದರೆ ಸರಿ. ಸದರಿ ಮೇಲ್ಮನವಿ ಇನ್ನೂ ವಿಚಾರಣೆಗಾಗಿ ಬಾಕಿ ಇರುತ್ತದೆ ಎಂದರೆ ಸರಿ. ನನ್ನ ತಮ್ಮ ಶಿವರಾಜ Engineering ಪದವೀಧರನಾಗಿದ್ದು ಈ ಹಿಂದೆ ಜೈಪೂರದಲ್ಲಿ ಕೆಲಸ ಮಾಡುತ್ತಿದ್ದ ಈಗ ಕೆಲಸ ಬಿಟ್ಟು ಬಂದಿರುತ್ತಾನೆ. ನನ್ನನ್ನು ರೋಟನಡಗಿ ಗ್ರಾಮಕ್ಕೆ ಮದುವೆ ಮಾಡಿ ಕೊಟ್ಟಿರುತ್ತಾರೆ. ನನ್ನ ಮದುವೆಯಾದ ನಂತರ ನಾನು ನನ್ನ ಗಂಡನ ಮನೆಯಲ್ಲಿ ಉಳಿಯುತ್ತಾ ಬಂದಿರುತ್ತೇನೆ ಎಂದರೆ ಸರಿ. ಈ ಹಿಂದೆ ನನ್ನ ಅಣ್ಣ ಶೇಖರಪ್ಪ ಇವನಿಗೆ ವಿಚಿತ್ರ ಖಾಯಿಲೆ ಬಂದಿತ್ತು ಎಂದರೆ ಸರಿಯಲ್ಲ. ಅವನು ವರ್ಷಾನುಗಂಟಲೆ ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಎಂದರೆ ಸರಿ. ಆ ನಂತರ ಅವನು ಮರಣ ಹೊಂದಿರುತ್ತಾನೆ ಎಂದರೆ ಸರಿ. ನನ್ನ ತಮ್ಮ ಶಿವರಾಜ ಇತನು ಯಾದಗಿರಿಯಲ್ಲಿ ಯಾವ ಕೆಲಸ ಮಾಡುತ್ತಾನೆ ಎಂದು ನನಗೆ ಗೊತ್ತಿಲ್ಲ.

3. ನಿಪಿ.1 ಮೃತ್ಯು ಪತ್ರ ಬರೆದ ದಿನವೇ ನನಗೆ ಸದರಿ ಮೃತ್ಯು ಪತ್ರದ ಬಗ್ಗೆ ಗೊತ್ತಾಗಿರುತ್ತದೆ. ನನ್ನ ಮಾವ ಅಂದರೆ ನನ್ನ ದೊಡ್ಡಮ್ಮನ ಅಳಿಯ ಮಲ್ಲರೆಡ್ಡೆಪ್ಪ ಇವರು ಕಾರು ಕಳುಹಿಸಿದ್ದರು ನಾನು ಮತ್ತು ನನ್ನ ತಾಯಿ ಸದರಿ ಕಾರಿನಲ್ಲಿ ಸಬ್ ರಜಿಸ್ಟ್ರಾರ್ ಕಚೇರಿ ಶಹಪೂರಿಗೆ ಬಂದಿದ್ದೇವು.

**ಈ ಹಂತದಲ್ಲಿ ಎದುರುದಾರ ಪರ ವಕೀಲರು ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾದಂ. ಶಹಾಪೂರ.